ಮಾನ್ಯ ವಿಧಾನ ಪರಿಷತ್ತ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 330ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ:31ಕ್ಕೆ ಮಾನ್ಯ ಮುಖ್ಯ ಮಂತ್ರಿಯವರ ಉತ್ತರ.

*****

ಸೂಚನೆ:

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ದೇವನಗೊಂದಿ ಗ್ರಾಮದಲ್ಲಿರುವ ಆಯಿಲ್ ಕಂಪನಿಗಳ ಆಯಿಲ್ ಟಾಸ್ತಾನುಗಳಿಂದ (ಪೆಟ್ರೋಲ್ ಮತ್ತು ಡೀಸೆಲ್) ಬಂಕುಗಳಿಗೆ ಸರಬರಾಜಾಗುವ ಟ್ಯಾಂಕರುಗಳಲ್ಲಿ ಬೇಬಿ ಟ್ಯಾಂಕ್ ಅಳವಡಿಸಿಕೊಂಡು, ಭಾರಿ ಅವ್ಯವಹಾರ ನಡೆದಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿರುತ್ತದೆ. ಈ ದಂಧೆಯಲ್ಲಿ ಭಾಗಿಯಾದವರ ವಿರುದ್ಧ ಸೂಕ್ತ ತನಿಖೆ ಮಾಡದೆ ಕಾನೂನು ಮಾಪನ ಇಲಾಖಾ ಅಧಿಕಾರಿಗಳು ಪೆಸೋ ಮಾನ್ಯತೆ ಪಡೆಯದ ನೂರಾರು ವಾಟರ್ ಟ್ಯಾಂಕರುಗಳಿಗೆ ಸ್ಟ್ಯಾಂಪಿಂಗ್ ಮಾಡಿ, ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಕಾನೂನು ಬಾಹಿರವಾಗಿ ಸಾರ್ವಜನಿಕ ಸುರಕ್ಷತೆಯನ್ನು ಲೆಕ್ಕಿಸದೆ ಡೀಸಲ್ ಮಾರಾಟ ಮಾಡಲು ಅವಕಾಶ ಮಾಡಿಕೊಟ್ಟಿರುತ್ತಾರೆ ಅಲ್ಲದೆ ಇದರೊಂದಿಗೆ ಸ್ಥಳೀಯ ಪೊಲೀಸ್ ಅಧಿಕಾರಿಗಳು ಶಾಮೀಲಾಗಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಮಾಡುತ್ತಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

ಉತ್ತರ:

ಅಧ್ಯಕ್ಷರು, ಬೆಂಗಳೂರು ಪೆಟ್ರೋಲಿಯಂ ಡೀಲರ್ಸ್ ಅಸೋಷಿಯೇಷನ್ ಇವರು ದಿನಾಂಕ:03.01.2022ರಂದು ಸಲ್ಲಿಸಿದ ದೂರಿನಲ್ಲಿ ತೈಲವನ್ನು ಸಾಗಿಸುವ ಟ್ಯಾಂಕ್ ಟ್ರಕ್ ಸಂಖ್ಯೆ:ಕೆಎ 01 ಎಎಲ್ 2468ರ ಟ್ಯಾಂಕ್ ಸಂಗ್ರಹಣೆ ಸಾಮರ್ಥ್ಯದ ಬಗ್ಗೆ ಅನುಮಾನ ವ್ಯಕ್ತಪಡಿಸಿರುತ್ತಾರೆ. ಸದರಿ ದೂರಿಗೆ ಸಂಬಂಧಿಸಿದಂತೆ ದಿನಾಂಕ:05.01.2022ರಂದು ಸಹಾಯಕ ನಿಯಂತ್ರಕರು(ತಾಂತ್ರಿಕ), ಕಾನೂನು ಮಾಪನಶಾಸ್ತ್ರ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇವರು ತಪಾಸಣೆಯನ್ನು ಕೈಗೊಂಡು ವರದಿಯನ್ನು ನೀಡಿದ್ದು, ಸದರಿ ಟ್ಯಾಂಕ್ ಟ್ರಕ್ ನ್ನು ತಪಾಸಿಸಲಾಗಿದ್ದು, ಸದರಿ ಟ್ರಕ್ ನಲ್ಲಿ ಅಳವಡಿಸಿರುವ ಟ್ಯಾಂಕ್ ಗಳು ಸರಿಯಾಗಿರುವುದಾಗಿ ತಿಳಿಸಿದ್ದಾರೆ. ಆದಾಗ್ಯೂ ಸದರಿ ಟ್ರಕ್ ಟ್ಯಾಂಕ್ ಗೆ ಅಳವಡಿಸಿರುವ ಸೀಲ್ ನ್ನು ಮುರಿದು ಮತ್ತೆ ತಪಾಸಣೆ ಮಾಡಬೇಕಾಗಿರುವುದರಿಂದ ಟ್ಯಾಂಕ್ ಟ್ರಕ್ ಸಂಖ್ಯೆ: ಕೆಎ 01 ಎಎಲ್ 2468 ರಲ್ಲಿ ತೈಲವನ್ನು ಸಾಗಾಣಿಕೆ ಮಾಡದಂತೆ ಹಾಗೂ ಸದರಿ ಟ್ರಕ್ ನ್ನು ಚಾಲನೆಗೆ ಅವಕಾಶ ನೀಡದಂತೆ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್ ಇವರಿಗೆ ಸೂಚಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮತ್ತೆ ಟ್ಯಾಂಕ್ ಟ್ರಕ್ ಸಂಖ್ಯೆ: ಕೆಎ01 ಎಎಲ್ 2468 ರ ತೈಲ ಸಂಗ್ರಹಣಾ ಟ್ಯಾಂಕ್‌ನ್ನು ಪರಿಶೀಲನೆಯನ್ನು ಸಹಾಯಕ ನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಇಲಾಖೆ, ತನಿಖಾದಳ-2 ಇವರಿಂದ ನಡೆಸಲಾಗಿದ್ದು, ಸದರಿ ಟ್ಯಾಂಕ್‌ನ ಹಿಂಬದಿಯ ಭಾಗದಲ್ಲಿ ಒಂದು ಅನಧಿಕೃತ ಟ್ಯಾಂಕ್ Unauthorised fittings / Hidden Compartment ಇರುವುದು ಪತ್ತೆ ಹಚ್ಚಲಾಗಿರುತ್ತದೆ. ಅದರಂತೆ ಸದರಿ ವಾಹನದ ಮಹಜರ್ ನಡೆಸಿ ಫೋಟೋ ಹಾಗೂ ವಿಡಿಯೋ ಚಿತ್ರೀಕರಣ ಮಾಡಲಾಗಿರುತ್ತದೆ. ಸದರಿ ಅವ್ಯವಹಾರಕ್ಕೆ ಸಂಬಂಧಿಸಿದಂತೆ ದಿನಾಂಕ:11.01.2022ರಂದು ಅನುಗೊಂಡಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದು, ಅಪರಾಧ ಸಂಖ್ಯೆ:0003/2022 IPC 1860(U/s-418,420, Petroleum Act 1934 (U/s-3,23) Essential Commodities Act 1955 (U/s-3,7) ರಡಿಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಯನ್ನು ಕೈಗೊಂಡು ಪ್ರಥಮ ವರ್ತಮಾನ

ವರದಿಯನ್ನು Prl.Civil Judge(Sr.Dn) & CJM Court, Hosakote, Bangalore Rural District ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

ತೈಲ ಕಂಪನಿಗಳ ವಿತರಣಾ ಘಟಕಗಳ ಟರ್ಮಿನಲ್‌ಗಳಲ್ಲಿ ಸಂಗ್ರಹಿಸಲಾಗಿರುವ ಡೀಸೆಲ್/ಪೆಟ್ರೋಲ್ ನ್ನು ಪೆಟ್ರೋಲ್ ಬಂಕ್‌ಗಳಿಗೆ ಸರಬರಾಜು ಮಾಡಲು ಸಾಗಾಣಿಕೆ ಗುತ್ತಿಗೆ ಕರಾರನ್ನು ತೈಲ ಕಂಪನಿಗಳು ಟ್ಯಾಂಕ್ ಟ್ರಕ್ ಮಾಲೀಕರೊಂದಿಗೆ ಮಾಡಿಕೊಂಡಿರುತ್ತವೆ. ಅದರಂತೆ ಟ್ಯಾಂಕ್ ಟ್ರಕ್‌ಗಳು ಹೊಂದಿರುವ ಸಂಗ್ರಹಣಾ ಕಂಪಾರ್ಟ್ ಮೆಂಟ್ ಗಳು ಸರಿಯಾದ ಅಳತೆಯನ್ನು ಹೊಂದಿರುವ ಬಗ್ಗೆ ಪರಿಶೀಲಿಸಿ ಕಾನೂನು ಮಾಪನಶಾಸ್ತ್ರ ಇಲಾಖೆಯ ವತಿಯಿಂದ ಸತ್ಯಾಪನೆ ಮಾಡಿ ಮುದ್ರೆಯನ್ನು ಮಾಡಲಾಗುತ್ತದೆ. ಈ ರೀತಿ ಸತ್ಯಾಪನೆ ಮಾಡಿ ಮುದ್ರೆ ಮಾಡಲಾದ ಟ್ಯಾಂಕ್ ಟ್ರಕ್‌ಗಳನ್ನು ಪ್ರತಿ ವರ್ಷ ಪರಿಶೀಲಿಸಿ, ಮತ್ತೆ ಮುದ್ರೆ ಮಾಡಿ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತದೆ.

ಟ್ಯಾಂಕ್ ಟ್ರಕ್ ಸಂಖ್ಯೆ: ಕೆಎ 01 ಎಎಲ್ 2468ರ ಟ್ಯಾಂಕ್ ನಲ್ಲಿ ಅನಧಿಕೃತವಾಗಿ ಬೇಬಿ ಟ್ಯಾಂಕ್ ಅಳವಡಿಸಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ತೈಲ ಕಂಪನಿಗಳು ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ಅಧಿಕಾರಿಗಳಿಗೆ ಈ ಕೆಳಕಂಡಂತೆ ಕ್ರಮವಹಿಸಲು ತಿಳಿಸಲಾಗಿದೆ.

1. ಡೀಸೆಲ್ / ಪೆಟ್ರೋಲ್ ಸಾಗಾಣಿಕೆ ಮಾಡುವ ಟ್ರಕ್‌ಗಳ ಟ್ಯಾಂಕ್‌ಗಳಲ್ಲಿ ಟಾರ್ಚ್ x-ray ಮತ್ತು scanner ಅಳವಡಿಸಲು ಕ್ರಮವಹಿಸುವಂತೆ ಹಾಗೂ ತೈಲ ಸಂಗ್ರಹಗಾರಗಳಿಂದ ತೈಲವನ್ನು ಟ್ಯಾಂಕ್‌ಗಳಿಗೆ ತುಂಬಿಸುವ ಸಮಯದಲ್ಲಿ ಸಂಬಂಧಪಟ್ಟ ಪೆಟ್ರೋಲ್ ಬಂಕ್‌ನ ಪ್ರತಿನಿಧಿಗಳು ವೀಕ್ಷಿಸಲು ಅವಕಾಶ ನೀಡುವಂತೆ ಹಾಗೂ ತೈಲ ಕಂಪನಿಗಳ ಹಂತದಲ್ಲಿ ವಿಶೇಷ ಜಾಗೃತಿ ದಳಗಳನ್ನು ರಚಿಸುವಂತೆ ತೈಲ ಕಂಪನಿಗಳಿಗೆ ತಿಳಿಸಲಾಗಿದೆ.
2. ಟ್ಯಾಂಕ್ ಲಾರಿಗಳ ಸತ್ಯಾಪನೆ ಮಾಡುವ ಸಂದರ್ಭದಲ್ಲಿ ಟ್ಯಾಂಕ್‌ನ ಕಂಪಾರ್ಟ್ ಮೆಂಟ್ ಗಳಲ್ಲಿನ ಮ್ಯಾನ್‌ಹೋಲ್‌ಗಳನ್ನು ಸಮಗ್ರವಾಗಿ ಪರಿಶೀಲಿಸಿ ಬೇಬಿ ಟ್ಯಾಂಕ್ ಅಳವಡಿಸಲಾಗಿದೆಯೇ/ಇಲ್ಲವೇ ಎಂಬ ಬಗ್ಗೆ ಖಚಿತಪಡಿಸಿಕೊಂಡು ತದನಂತರ ಸತ್ಯಾಪನೆ ಮುದ್ರೆ ಮಾಡುವಂತೆ ಹಾಗೂ ತೈಲ ಕಂಪನಿಗಳು ಮತ್ತು ತೈಲ ವಿತರಕರು ಟ್ಯಾಂಕ್ ಟ್ರಕ್‌ಗಳನ್ನು ತಪಾಸಣೆ ಮಾಡುವಂತೆ ಕೋರಿದ್ದಲ್ಲಿ, ಕೂಡಲೇ ಅಗತ್ಯ ಕ್ರಮವಹಿಸುವಂತೆ ಕಾನೂನು ಮಾಪನಶಾಸ್ತ್ರ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಸಂಖ್ಯೆ: ಆನಾಸ145 ಕಾಮಾಸೇ 2022 (ಇ-ಆಫೀಸ್)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

330 — 31